ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ/ವಿ.ಯೋ/31/Placement Cell/2014-15

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:25-06-2018.

## ಅಧಿಕೃತ ಜ್ಞಾಪನ ಪತ್ರ

ರಾಜ್ಯದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿನ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪದವಿಯ ಹಾಗೂ ಸ್ನಾತಕೋತ್ತರ ಪದವಿಯ ನಂತರದ ಉದ್ಯೋಗಾವಕಾಶಗಳ ಬಗ್ಗೆ ಮಾಹಿತಿ ನೀಡುವುದು, ತರಬೇತಿ ನೀಡುವುದು ಮತ್ತು ಉದ್ಯೋಗ ಮೇಳಗಳನ್ನು ಆಯೋಜಿಸುವುದು ಅನಿವಾರ್ಯವೆಂದು ಪರಿಗಣಿಸಲಾಗಿದೆ. ಪರಿಷ್ಕೃತ ನ್ಯಾಕ್ ಮಾನ್ಯತೆಯಲ್ಲಿ ಪ್ಲೇಸ್‌ಮೆಂಟ್ ಸೆಲ್‌ನ ಕಾರ್ಯಕ್ರಮಗಳಿಗೆ ಅಂಕಗಳನ್ನು ನೀಡಲಾಗುತ್ತಿದ್ದು, ಈ ನಿಟ್ಟಿನಲ್ಲಿ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿನ ಪ್ಲೇಸ್‌ಮೆಂಟ್ ಸೆಲ್‌ಗಳನ್ನು ಸದೃಢಗೊಳಿಸಲು ಸಮಿತಿಯ ರಚನೆಯನ್ನು ಈ ರೀತಿಯಾಗಿ ಮಾಡಲು ಸೂಚಿಸಲಾಗಿದೆ.

| | | |
|---|---|---|
| 1 | ಅಧ್ಯಕ್ಷರು | ಸದರಿ ಕಾಲೇಜಿನ ಪ್ರಾಂಶುಪಾಲರು. |
| 2 | ಸಂಚಾಲಕರು<br>(ಪ್ರತ್ಯೇಕವಾಗಿ ಪದವಿ ಹಾಗೂ ಸ್ನಾತಕೋತ್ತರ) | ಸದರಿ ವಿಷಯದಲ್ಲಿ ಜ್ಞಾನವುಳ್ಳವರು, ತರಬೇತಿ ಹೊಂದಿದವರಿಗೆ ಆದ್ಯತೆ ಕೊಡಿ. |
| 3 | ಆಂತರಿಕ ಸದಸ್ಯರು | ಕಾಲೇಜಿನ ಎಲ್ಲಾ ವಿಭಾಗಗಳ ಪ್ರತಿನಿಧಿಗಳಿರುವುದು ಸೂಕ್ತ |
| 4 | ಬಾಹ್ಯ ಸದಸ್ಯರು/ಅಥವಾ ಸಲಹೆಗಾರರು | 1. ಉದ್ಯೋಗ ನೀಡುವ ಸಂಸ್ಥೆಗಳ HRs,<br>2. ಉಚಿತವಾಗಿ ತರಬೇತಿ ನೀಡುವ (Interview, Resume Writing, Competitive Exams, Self Employment, ಇತರ) ಸಂಸ್ಥೆಗಳ ಮುಖ್ಯಸ್ಥರು/ಅಧಿಕಾರಿಗಳು,<br>3. ಸ್ಥಳೀಯ ಬ್ಯಾಂಕ್, LIC, ರೈಲ್ವೆ, ಇತರೆ ಸಂಸ್ಥೆಗಳ ಮುಖ್ಯಸ್ಥರು/ಅಧಿಕಾರಿಗಳು,<br>4. ಸ್ಥಳೀಯ ಉದ್ಯೋಗ ವಿನಿಮಯ ಕಛೇರಿಯ ಮುಖ್ಯಸ್ಥರು/ಅಧಿಕಾರಿಗಳು,<br>5. ಸ್ಥಳೀಯ ಜಿಲ್ಲಾ ಕೈಗಾರಿಕಾ ಕೇಂದ್ರದ (District Industry Centre)ನ ಮುಖ್ಯಸ್ಥರು/ಅಧಿಕಾರಿಗಳು,<br>6. ಇತರೆ. |
| 5 | ವಿಶೇಷ ಮಾರ್ಗದರ್ಶಕರು | ಸದರಿ ಜಿಲ್ಲೆಗಳ IAS/IPS/KAS/IRS ಹಾಗೂ ಇತರೆ ಅಧಿಕಾರಿಗಳು. |

ಮೇಲ್ಕಾಣಿಸಿದ ಸಮಿತಿಯನ್ನು ಈ ಆದೇಶದ ಒಂದು ತಿಂಗಳ ಒಳಗೆ ರಚಿಸಿ ಶೈಕ್ಷಣಿಕ ವರ್ಷ 2018-19ರ ಪ್ರಾರಂಭದಿಂದಲೇ, ವಿಶೇಷವಾಗಿ ಅಂತಿಮ ವರ್ಷದ ಪದವಿ ಹಾಗೂ ಎಲ್ಲಾ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಸಂದರ್ಶನದ ಬಗ್ಗೆ, Resume ಬರೆಯುವುದರ ಬಗ್ಗೆ, ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳ ಬಗ್ಗೆ, ಸ್ವ-ಉದ್ಯೋಗದ ಬಗ್ಗೆ ಮಾಹಿತಿ, ತರಬೇತಿ ನೀಡುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸೂಚಿಸಲಾಗಿದೆ.

ಕಾಲೇಜು ಶಿಕ್ಷಣ ಆಯುಕ್ತರು.

**ಇವರಿಗೆ:**

1) ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಸೂಕ್ತ ಕ್ರಮಕ್ಕಾಗಿ.
2) ಎಲ್ಲಾ ಪ್ರವರ್ತಕ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಸೂಕ್ತ ಕ್ರಮಕ್ಕಾಗಿ.
3) ಸಂಬಂಧಪಟ್ಟ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ Placement Cell ನ ಸಂಚಾಲಕರು – ಸೂಕ್ತ ಕ್ರಮಕ್ಕಾಗಿ.

**ಪ್ರತಿಯನ್ನು:**

1) ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಮಂಗಳೂರು, ಧಾರವಾಡ, ಶಿವಮೊಗ್ಗ ಮತ್ತು ಕಲಬುರ್ಗಿ – ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
2) ಮಾಹಿತಿ ಅಧಿಕಾರಿಗಳು, ಮಾಹಿತಿ ತಂತ್ರಜ್ಞಾನ ವಿಭಾಗ, ಕಾಶಿಇ, ಬೆಂಗಳೂರು – ಇಲಾಖಾ ವೆಬ್ ಸೈಟಿನಲ್ಲಿ ಪ್ರಕಟಿಸಲು.
3) ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 230 ಡಿಸಿಇ 2017

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 07.06.2018

ಇಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ),
ಬೆಂಗಳೂರು.

ಗೆ:

ಆಯುಕ್ತರು,
ಕಾಲೇಜು ಶಿಕ್ಷಣ ಇಲಾಖೆ,
ಬೆಂಗಳೂರು-560001.

516
08 JUN 2018
Jd (a)

ಮಾನ್ಯರೆ,

ವಿಷಯ: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಪ್ರವೇಶಾತಿಯನ್ನು ರದ್ದುಪಡಿಸಿಕೊಳ್ಳುವ ವಿದ್ಯಾರ್ಥಿಗಳಿಗೆ ಪ್ರವೇಶಾತಿ ಶುಲ್ಕವನ್ನು ಮರುಪಾವತಿಸುವ ಬಗ್ಗೆ.

ಉಲ್ಲೇಖ: ತಮ್ಮ ಪತ್ರ ಸಂಖ್ಯೆ: ಕಾಶಿಇ/21/ಯುಜಿಸಿ-ನಿಯಮ/2017-18/ಶೈವಿ, ದಿನಾಂಕ : 13.11.2017

-----

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ತಮ್ಮ ಪತ್ರವನ್ನು ಪರಿಶೀಲಿಸಲಾಯಿತು. ಸದರಿ ಪತ್ರದಲ್ಲಿ ತಿಳಿಸಿರುವಂತೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಪ್ರವೇಶಾತಿಯನ್ನು ಪಡೆದು ನಂತರ ಪ್ರವೇಶಾತಿಯನ್ನು ಸ್ವಯಂ ರದ್ದುಪಡಿಸಿಕೊಳ್ಳುವ ವಿದ್ಯಾರ್ಥಿಗಳಿಗೆ ಈ ಕೆಳಕಂಡಂತೆ ಶುಲ್ಕ ಮರುಪಾವತಿಸಲು ಸರ್ಕಾರದ ಅನುಮತಿ ನೀಡಲಾಗಿದೆ ಎಂದು ತಮಗೆ ತಿಳಿಸಲು ನಿರ್ದೇಶಿತನಾಗಿದ್ದೇನೆ.

| S.N | Percentage of Refund of Aggregate fees | Point of Time when notice of withdrawal of admission is served to HEI |
|---|---|---|
| 1 | 100% | 15 days before the formally notified last date of admission |
| 2 | 80% | Not more than 15 days after the formally-notified last date of admission |
| 3 | 50% | More than 15 days but less than 30 days after the formally-notified last date of admission |
| 4 | 0% | More than 30 days after the formally-notified last date of admission |

ತಮ್ಮ ನಂಬುಗೆಯ,

(ಕೆ.ಶಿವಲಿಂಗಯ್ಯ) 8/6
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಕಾಲೇಜು ಶಿಕ್ಷಣ).

12/6/18

# ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ/ಶೈವಿ/208/ಪದವಿ ಶುಲ್ಕ/2017-18

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:26/06/2018

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಪ್ರವೇಶಾತಿಯನ್ನು ರದ್ದುಪಡಿಸಿಕೊಳ್ಳುವ ವಿದ್ಯಾರ್ಥಿಗಳಿಗೆ ಪ್ರವೇಶಾತಿ ಶುಲ್ಕವನ್ನು ಮರುಪಾವತಿಸುವ ಸಲುವಾಗಿ ಅನುಮತಿಸಿರುವ ಸರ್ಕಾರದ ಪತ್ರ ಸಂಖ್ಯೆ: ಇಡಿ 230 ಡಿಸಿಇ 2017 ಬೆಂಗಳೂರು ದಿನಾಂಕ:07.06.2018ನ್ನು ಕೆಳಕಂಡವರ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಪರಿಚಲಿಸಲಾಗಿದೆ.

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ:

1. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ, ಕಲಬುರಗಿ.
2. ರಾಜ್ಯದ ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಜಂಟಿ ನಿರ್ದೇಶಕರ ಮುಖಾಂತರ.
3. ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು – ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲು ತಿಳಿಸಿದೆ.

ಪ್ರತಿಯನ್ನು:

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತಶಾಖೆಗೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು-560 001.
2) ಕಛೇರಿ ಪ್ರತಿ.